# ಖುಷಿ ಖುಷಿ ಆಗ್ಯಾವ ದಿನ

■ **ಸೋಮಲಿಂಗ ಬೇಡರ ಆಳೂರ**
ಕಲೆ: ಸಂತೋಷ್ ಸಸಿಹಿತ್ಲು

ದಳದಳ ಸುರಿದಾದ ಮಳಿ
ಸಳಸಳ ಹರಿದಾವ ಹೊಳಿ
ಭರಭರ ತುಂಬ್ಯಾವ ಕೆರಿ
ಲಕಲಕ ಹೊಳಿದಾವ ಏರಿ

ತಪತಪ ತೊಯ್ದ್ಯಾವ ಗಿರಿ
ದಭದಭ ಧುಮುಕ್ಯಾವ ಝರಿ
ಬುರುಬುರು ಉಕ್ಯಾದ ನೊರಿ
ಕಣ್ಮನ ಸೆಳೆದಾವ ತೊರಿ

ಟಪಟಪ ಉದರ್‍ಯಾವ ಹನಿ
ಕಿಚಿಪಿಚಿ ಅಂದಾವ ಗಿಣಿ
ತಟತಟ ಸೋರ್‍ಯಾವ ಮನಿ
ಮಿರಿಮಿರಿ ಮಿಂಚ್ಯಾವ ಗೊನಿ

ತುಂತುಂಬಿ ತುಳುಕ್ಯಾವ ಮಡಿ
ಗರಿಗರಿ ಹಿರದಾವ ಹೊಡಿ
ತುದಿತುದಿ ಮೂಡ್ಯಾವ ಮಿಡಿ
ಢಣಢಣ ಅಂದಾವ ಗುಡಿ

ಇಣುಕಿಣುಕಿ ನೋಡ್ಯಾನ ಇನ
ಬಳಬಳುಕಿ ನಿಂತಾವ ಬನ
ಖುಷಿಖುಷಿ ಆಗ್ಯಾವ ದಿನ
ಹಿರಿಹಿರಿ ಹಿಗ್ಗ್ಯಾರ ಜನ

■



---

## ಕುಂಚ ಪ್ರಪಂಚ





**ನಿಹಾರಿಕಾ ಎ.**
3ನೇ ತರಗತಿ,
ಜೈನ್ ವಿದ್ಯಾಲಯ
ದಾವಣಗೆರೆ